ಶ್ರೀ ಎಚ್. ಡಿ. ದೇವೇಗೌಡ

ವಿರೋಧ ಪಕ್ಷದಲ್ಲೀ ಇರಲಿ, ಆಡಳಿತ ಪಕ್ಷದಲ್ಲೇ ಇರಲಿ ಈ ರೀತಿ ಆಗಬಾರದು. ಪಕ್ಷಗಳಲ್ಲಿ ಭೇಧಭಾವ ಬಂದೇ ಬರುತ್ತದೆ ಹಿಂದಿದ್ದ ಮುಖ್ಯ ಮಂತ್ರಿಗಳ ಕಾಲದಲ್ಲಿ ಒಬ್ಬ ಸದಸ್ಯರ ಮೇರವಣಿಗೆ ಮಾಡಿಸಿದರಂ ಎಂದು ರಾಜಕೀಯ ಬೆಳೆಸಿ ಆ ಹಗೆಯನ್ನು ದಮನ ಮಾಡಬೇಕು ಎಂದು ಈ ರೀತಿ ಮಾಡುವಂಥದು ಯೋಗ್ಯವಾದುದಲ್ಲ. ಆದುದರಿಂದ ಮುಂದೆ ಯಾರಾದರೂ ಸರ್ಕಾರ ಆಸಕ್ತಿಯನ್ನು ವಹಿಸಿ ಇಂತಹ ಘಟನೆ ನಡೆಯದೆ ಇರುವ ರೀತಿಯಲ್ಲಿ ತಾವು ರಕ್ಷಣೆ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Statement of the Ministers for Industries *Re.* Ptroection to members.

†ಶ್ರೀ ಎಸ್. ಎಂ. ಕೃಷ್ಣ:—(ಕೈಗಾರಿಕಾ ಶಾಖೆಯ ಮಂತ್ರಿಗಳು) ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಸ್. ಸಿದ್ಧಪ್ಪನವರ ಮೇಲೆ ಯಾರೋ ಕೈ ಮಾಡಿರತಕ್ಕಂಥ ಪ್ರಕರಣ ಈಗ ತಾನೆ ನಮ್ಮ ಗಮನಕ್ಕೆ ಬಂದಿದೆ. ಈ ಕೃತ್ಯ ಯಾರೇ ಮಾಡಿರಲಿ, ಯಾವ ಸಂದರ್ಭದಲ್ಲಿ ಮಾಡಿರಲಿ ಅದನ್ನು ತೀವ್ರವಾಗಿ ಖಂಡಿಸಬೇಕಾಗಿರತಕ್ಕಂಥಾದ್ದು ಈ ಸದನದ ಜವಾಬ್ದಾರಿ ಜೊತೆಗೆ ನಿನ್ನೆ ರಾತ್ರಿ ಏನಾ ಘಟನೆ ನಡೆದಿದೆ ಅದರ ಬಗ್ಗೆ ತೀವ್ರತರವಾದ ತನಿಖೆ ಸರ್ಕಾರದ ವತಿಯಿಂದ ಮಾಡಿಸುತ್ತೇನೆ ಎನ್ನುವ ಭರವಸೆಯನ್ನು ಈ ಸಭೆಗೆ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಮತ್ತು ಈ ಸಭೆಯ ಸದಸ್ಯರೆಲ್ಲರಿಗೂ ಬಹು ಹೆಚ್ಚಿನ ಹೊಣೆಗಾರಿಕೆ ಇದೆ. ರಾಜ್ಯದಲ್ಲಿ ಆಗತಕ್ಕಂತ ಎಲ್ಲ ವ್ಯವಹಾರಗಳ ಬಗ್ಗೆ ಅವರಿಗೆ ಸೂಕ್ತವಾದಂತ ನಿಲುವುಗಳನ್ನು ಆಗಿಂದಾಗ್ಗೆ ತೆಗೆದುಕೊಳ್ಳಬೇಕಾಗುತ್ತದೆ. ಆ ನಿಲುವನ್ನು ತೆಗೆದುಕೊಳ್ಳತಕ್ಕಂತ ಸರ್ವ ಸ್ವಾತಂತ್ರ್ಯ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಇದೆ ಅದನ್ನು ಕುಂಠಿತಗೊಳಿಸತಕ್ಕಂತ ಯಾವುದೇ ಬೆಳವಣಿಗೆಯನ್ನೂ ಸಹ ಈಗ ಅಸ್ತಿತ್ವದಲ್ಲಿರತಕ್ಕಂಥ ಸರ್ಕಾರ ಸಹಿಸುವುದಿಲ್ಲ ಎಂದು ನಾನು ಪ್ರಾಮಾಣಿಕವಾಗಿ ಹೇಳಲು ಇಚ್ಛೆಪಡುತ್ತೇವೆ. ಆದುದರಿಂದ ಯಾರಾದರೂ ಈ ಘಟನೆಗೆ ಜವಾಬ್ದಾರರು ಎಂದು ಭಾವಿಸುವುದಾದರೆ ಅದು ಔದಾರ್ಯರಹಿತವಾದ ಭಾವನೆ ಆದೀತು ಎಂದು ಬಹಳ ನಮ್ರತೆಯಿಂದ ಹೇಳಲು ಇಚ್ಛೆಪಡುತ್ತೇನೆ. ಈ ಮನೆಯ ಮಾನ್ಯ ಸದಸ್ಯರೊಬ್ಬರ ಮೇಲೆ ಕೈ ಮಾಡಿರುವುದು ಪ್ರತಿಯೊಬ್ಬ ಸದಸ್ಯರ ಮೇಲೂ ಕೈ ಮಾಡಿದಂತೆ ಎನ್ನುವುದನ್ನು ತಾವು ಮರೆಯಬಾರದು. ತಾವು ಅದರ ಬಗ್ಗೆ ಎಷ್ಟು ತೀವ್ರತೆ, ಕಳಕಳಿ ಹರಿಸುತ್ತಿರೋ ಅಷ್ಟೇ ತಿವ್ರತೆ ಕಳಕಳಿ ನಾವೂ ಸಹ ಅವರ ಬಗ್ಗೆ ಗಮನವನ್ನು ಹರಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಡಲು ಇಚ್ಛೆಪಡುತ್ತೇನೆ.

ಅಧ್ಯಕ್ಷರೇ, ಮಹಾಚುನಾವಣೆಗಳು ನಡೆದು 10 ತಿಂಗಳಾಯಿತು. ಚುನಾವಣೆಯ ಸಮಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಹಾಗೆ ಆಗಿಂದಾಗ್ಗೆ ಸ್ಥಳೀಯ ಕಾರಣಗಳಿಗಾಗಿ ಸ್ಥಳೀಯವಾಗಿ ಕೆಲವು ದ್ವೇಷಗಳು, ಕೆಲವು ಅಸಮಧಾನಗಳು ಇರತಕ್ಕದ್ದು ಸ್ವಾಭಾವಿಕ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವಾಗತಕ್ಕಂಥ ಮಾತೇ, ಆದರೆ 10 ತಿಂಗಳಾದ ಮೇಲೂ ಅದು ಮರುಕಳಿಸತಕ್ಕಂತಾದ್ದು ಸಾಧ್ಯವೇ ಎನ್ನುವುದನ್ನೂ ಕೂಡ ಆಲೋಚನೆ ಮಾಡಬೇಕು ಮಾನ್ಯ ಹೆಚ್. ಎಸ್. ಸಿದ್ಧಪ್ಪನವರು ಈ ಬಗ್ಗೆ ಕಳಕಳಿಯಿಂದ ಮಾತನಾಡಿದ್ದಾರೆ, ಅವರೂ ನಮ್ಮ ಸ್ನೇಹಿತರೇ. ಮಾನ್ಯ ವಿರೊಧಪಕ್ಷದ ನಾಯಕರೂ ಕೂಡ ಅದರ ಬಗ್ಗೆ ಹೇಳಿದ್ದಾರೆ ಅಲ್ಲಿರತಕ್ಕ ಪೋಲಿಸ್ ಅಧಿಕಾರಿಗಳು ಈ ವಿಚಾರದಲ್ಲಿ ತೀವ್ರ ಗಮನ ಹರಿಸಿದ್ದಾರೆ ಎಂದು. ಅಷ್ಟು ಮಾತ್ರ ನಾನು ಈ ಸದನದ ಮುಂದೆ ಹೇಳುತ್ತೆನೆ. ಲಾ ಆಂಡ್ ಆರ್ಡರ್ ಪ್ರಶ್ನೆ ಬಂದಾಗ ದೇಶದ ಶಾಸನ ಸಭಾ ಸದಸ್ಯರೇ ಅಲ್ಲ ಪ್ರತಿಯೊಬ್ಬ ನಾಗರೀಕನ ಹಕ್ಕು ಭಾದ್ಯತೆಯ ರಕ್ಷಣೆ ಬಗ್ಗೆ ಪಕ್ಷಭೇದವಿಲ್ಲದೆ ಸರ್ಕಾರ ಕೆಲಸ ಮಾಡುತ್ತದೆ ಎಂದು ಶ್ರುತಪಡಿಸುತ್ತೆನೆ. ಮಾನ್ಯ ಹೆಚ್. ಎಸ್. ಸಿದ್ಧಪ್ಪನವರು ನಿನ್ನೆ ನಡೆದ ಘಟನೆ ಬಗ್ಗೆ ಏನು ಹೇಳಿದ್ದಾರೋ ಅವರ ಮನಸ್ಸನ್ನು ನೋಯಿಸದೆ ಅದರ ಬಗ್ಗೆ ನಮ್ಮ ಇಲಾಖೆಯಿಂದ ಫ್ಯಾಕ್ಟ್ಸ್‌ಗಳನ್ನು ತರಿಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಆದರೆ ನಾನು ಇನ್ನೂ ಒದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಮಾನ್ಯ ಸದಸ್ಯರಿಗೆ ಯಾರಿಗಾದರೂ ಇಂತಹ ಸೂಚನೆ ಕಂಡುಬಂದಾಗ, ತಮ್ಮ ಮೇಲೆ ಹತ್ಯ ನಡೆಯತಕ್ಕಂಥ ಅವಕಾಶಗಳು ಇವೆ ಎಂದು ಕಂಡು ಬಂದಾಗ ಸರ್ಕಾರಕ್ಕೆ ಅದನ್ನು ತಿಳಿಸಿದರೆ ಅವರಿಗೆ ಸೂಕ್ತವಾದಂತ ಪ್ರೊಟೆಕ್ಷನ್ ಕೊಡತಕ್ಕ ವ್ಯವಸ್ಥೆಯನ್ನೂ ಕೂಡ ಶಾಸನ ಸಭೆ ನಡೆಯತಕ್ಕಂಥ ಸಮಯದಲ್ಲಿ ನಾವು ದೊರಕಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀಮಾನ್ ಸಿದ್ದಪ್ಪನವರಿಗೆ ಪ್ರಾರ್ಥನೆ ಮಾಡುತ್ತೇನೆ ಮತ್ತು ಪೋಲೀಸ್ ಪ್ರೊಟೆಕ್ಷನ್ ಬೇಕಾದರೆ ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಈ ಘಟನೆಯು ಪಕ್ಷಗಳ ಭೇದ ಭಾವನೆಯಿಂದ ನಡೆದಿರತಕ್ಕ ಘಟನೆ ಆಗಿದೆ. ಆದ್ದರಿಂದ ಎಲ್ಲರೂ ಕೂಡ ಇದರ ಬಗ್ಗೆ ಸಾಕಾದಷ್ಟು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನಾನು ತಮ್ಮೆಲ್ಲರಿಗೂ ಸಮಾಧಾನ ತಂದುಕೊಳ್ಳಿ ಬೇಕೆಂದು ಹೇಳಲು ಇಷ್ಟಪಡುತ್ತೇನೆ.

2-30 P.M.

Taking up the Birla Affairs for Discussion

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ ೩೧೨ರ ಪ್ರಕಾರ ೨-೩ ದಿನಗಳ ಹಿಂದೆ ನೋಟೀಸ್ ಕಳುಹಿಸಿದ್ದೆ ಅದು ಅತಿ ಮುಖ್ಯವಾವ ವಿಷಯ ಆದ್ದರಿಂದ ಶ್ರೀಮಾನ್ ಕಾಗೋಡು ತಿಮ್ಮಪ್ಪ ಮತ್ತು ೫-೬ ಜನ ಸೇರಿ ನೋಟೀಸ್ ಕೊಟ್ಟಿದ್ದೇವೆ. ಅದು ನಮ್ಮ ಆದೇಶದಲ್ಲಿರುವ ಬಿರ್ಲಾರವರ ಬಗ್ಗೆ ಆಗಿದೆ.

ಅಧ್ಯಕ್ಷರು —ಅದನ್ನು ಕಳುಹಿಸಿದ್ದೇವೆ ಉತ್ತರ ಬಂದ ತಕ್ಷಣ ಅಜೆಂಡಾದಲ್ಲಿ ಹಾಕುತ್ತೇವೆ.

Delay in taking up Miscellaneous notices

ಶ್ರೀ ಎಂ. ಎಸ್. ಕೃಷ್ಣನ್.—ಅದು ಕಾಲ್ ಅಟೆನ್‌ಷನ್ ಮೋಷನ್ ಅಲ್ಲ ರೂಲ್ ೩೧೨ ರ ಪ್ರಕಾರ ತಮ್ಮ ಮೂಲಕ ಸರ್ಕಾರದ ಗಮನವನ್ನು ನಾನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಬರಲಿ.

ಶ್ರೀ ಕಾಗೋಡು ತಿಮ್ಮಪ್ಪ.—ರೂಲ್ ೩೧೨ರ ಪ್ರಕಾರ ಚರ್ಚೆ ಮಾಡುವುದಕ್ಕೆ ಬೆಂಗಳೂರು ನಗರದ ಉಪಾಧ್ಯಾಯರ ಶೋಷಣೆ ಬಗ್ಗೆ ಮತ್ತು ಕೆಲವು ಖಾಸಗಿ ಶಾಲೆಗಳಲ್ಲಿ ನಡೆಯತಕ್ಕ ವ್ಯಾಪಾರಿ ಮನೋ ಭಾವದ ಆಡಳಿತದ ಬಗ್ಗೆ ಚರ್ಚೆ ಮಾಡುವ ಒಂದು ವಿಷಯ ತಮಗೆ ಕಳುಹಿಸಿಕೊಟ್ಟಿದ್ದೆ?

ಅಧ್ಯಕ್ಷರು.—ಮಂತ್ರಿಗಳು ಬರಲಿ.

ಶ್ರೀ ಕೊಣಂದೂರು ಲಿಂಗಪ್ಪ.—ಅರಣ್ಯ ಸಚಿವರು ಇದ್ದಾರೆ, ಮಲೆನಾಡಿನಲ್ಲಿ ಇವೊತ್ತು ಕಟ್ಟಿಗೆ ಗಾಡಿಗೆ ಎರಡೂವರೆ ರೂಪಾಯಿ ವಸೂಲು ಮಾಡಬೇಕು ಎಂದು ಆದೇಶ ಇದ್ದರೂ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಗಾಡಿಗೆ ೫ ರೂಪಾಯಿ ವಸೂಲು ಮಾಡುತ್ತಿದ್ದಾರೆ ಮತ್ತು ಅಸೇಕರಿಗೆ ತೊಂದರೆಕೊಡುತ್ತಿದ್ದಾರೆ, ಇದರ ಬಗ್ಗೆ ಷಾರ್ಟ್ ನೋಟೀಸ್ ಕೊಶ್ಚನ್ ಕಳುಹಿಸಿ ೬-೭ ದಿವಸಗಳಾಯಿತು.

ಅಧ್ಯಕ್ಷರು.—ಇವೊತ್ತು ಅಥವಾ ನಾಳೆ ಉತ್ತರ ಬರುತ್ತದೆ. ಬಂದ ತಕ್ಷಣ ಅಜೆಂಡಾದಲ್ಲಿ ಹಾಕುತ್ತೇವೆ.

Protection to member (contd.)

ಶ್ರೀ ಕೆ. ಎಚ್. ಹನುಮೇಗೌಡ.—ಕಳೆದ ೨೦ ದಿವಸಗಳ ಮೇಲಾದರೂ ಆ ಕೇಡಿಗಳನ್ನು ಅರೆಸ್ಟ್ ಮಾಡಿಲ್ಲ. ಅವನು ಯಾರದೋ ಆಶ್ರಯಪಡೆದು ಅಲ್ಲಿಯೇ ಓಡಾಡುತ್ತಿದ್ದಾನೆ. ಅವನ ಮೇಲೆ ಆಕ್ಷನ್ ತೆಗೆದುಕೊಂಡಿಲ್ಲ. ಪೋಲೀಸರನ್ನು ಕೇಳಿದರೆ ಬೇರೆಯವರನ್ನು ಹಿಡಿದುಕೊಂಡು ಹೇಳಿಕೆ ತೆಗೆದುಕೊಂಡು ಕಳುಹಿಸುತ್ತಾರೆ. ಹಿಂದುಗಡೆ ಇದ್ದುಕೊಂಡು ದುಡ್ಡನ್ನು ಕೊಡುವವರನ್ನು ವಿಚಾರಣೆ ಮಾಡಿಲ್ಲ. ಪೋಲೀಸರು ಆಕ್ಷನ್ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನೂ ಹೇಳಲಿಲ್ಲ. ಅವರು ಈ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯಮಾಡುತ್ತೇನೆ.

ಅಧ್ಯಕ್ಷರು.—ಎಲ್ಲ ವಿವರ ತರಿಸುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಹೇಳಿದರು.